ಶ್ರೀ ಹೆಚ್.ಡಿ. ರೇವಣ್ಣ : ಮುಖ್ಯಮಂತ್ರಿಗಳು ಮತ್ತು ನೀವು ಬೇಕಾದರೆ ಪಕ್ಕದಲ್ಲಿ ಕುಳಿತುಕೊಂಡು ಅಧಿಕಾರ ನಡೆಸಿಕೊಳ್ಳಿ.[14]*** ನನಗೆ ಶಕ್ತಿ ಇದೆ ನಾನು ಮಾತನಾಡಿದ್ದೇನೆ. ಲೋಕಾಯುಕ್ತ ವರದಿಯನ್ನು ನೀವು ಏಕೆ ಎರಡು ವರ್ಷ ಇಟ್ಟುಕೊಂಡಿರಿ ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಇದಕ್ಕಿಂತ ದಾಖಲೆ ಇನ್ನೇನು ಸಿಗುತ್ತದೆ ? ಮಾನ್ಯ ಅಧ್ಯಕ್ಷರೆ ವಿಧಾನಪರಿಷತ್ತಿನಲ್ಲಿ ಯಾರೋ ಒಬ್ಬರು ಮಂತ್ರಿಗಳು ಹೇಳಿಕೆ ಕೊಡುವಂತಹ ಸಂದರ್ಭದಲ್ಲಿ ದಾಖಲೆ ಕೊಡಿ ಎಂದರು. ದಾಖಲೆಯ ಕಾಪಿ ತಂದುಕೊಟ್ಟಿದ್ದೇನೆ.

ಅಧ್ಯಕ್ಷರು : ಈಗ ನಾನು ಮತ್ತೆ ಮತ್ತೆ ಸ್ಪಷ್ಟೀಕರಣ ಕೊಡುವ ಅಗತ್ಯವಿಲ್ಲ. ನಾನು ಬಹಳ ಸ್ಪಷ್ಟವಾಗಿ ಹೇಳಿದೆ. ನೀವು ಮಾತನಾಡುತ್ತಿರುವಾಗ ಈಗಾಗಲೇ ಹೇಳಿದ ಹಾಗೆ ನಿಯಮ 327 ಅದರ ಬಗ್ಗೆ ನಾನು ಏನೂ ಹೇಳಲಿಲ್ಲ. ನೀವು ನೇರವಾಗಿ ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡಿದ್ದೀರಿ. *** ಇದು direct allegation against the Chief Minister. ನಾನು ಕೊಟ್ಟಂಥ ಪತ್ರ ನಿಮ್ಮ ಹತ್ತಿರ ದಾಖಲೆ ಇದ್ದರೆ ಕೊಡಿ ಎಂದು ಅವರು ಕೇಳಿದರು. ನೀವು ಕೊಡಲಿಲ್ಲ. ನಿಮ್ಮ ಹತ್ತಿರ ಇದ್ದರೆ ಕೊಟ್ಟುಬಿಡಿ, ಈಗಲಾದರೂ ಕೊಟ್ಟುಬಿಡಿ. ನೀವು ಮಾಡಿದಂತಹ ಆಪಾದನೆಗೆ ಸರಿಯಾಗುತ್ತದೆ. ಇಲ್ಲದೇ ಹೋದರೆ ದಾಖಲೆ ರಹಿತವಾಗಿ ಆಧಾರರಹಿತವಾಗಿ ಈ ರೀತಿಯಾಗಿ ಆಪಾದನೆ ಮಾಡಿದರೆ what will be the message ? ನೀವು ಕ್ಷಮಾಪಣೆ ಕೇಳಬೇಕು. I upheld this. ನಿಮ್ಮ ಹತ್ತಿರ ದಾಖಲೆ

---

[14] ***ಮಾನ್ಯ ಸಭಾ ಅಧ್ಯಕ್ಷರ ಆದೇಶದನ್ವಯ ಕಡತದಿಂದ ತೆಗೆದು ಹಾಕಲಾಗಿದೆ.

ಇದ್ದರೆ ಈಗಲೂ ಅವಕಾಶ ಕೊಡುತ್ತೇನೆ, ಕೊಡಿ. ಇಲ್ಲದೇ ಹೋದರೆ you have violated Rule 327, you have violated Rule 328, ನಾನು ವಿಧಾನ ಪರಿಷತ್ತಿನ ವಿಚಾರ ಹೇಳಲೇ ಇಲ್ಲ. ನಾನು ವಿಧಾನ ಪರಿಷತ್ತಿನ ಬಗ್ಗೆ ಕೊಡಲೇ ಇಲ್ಲ, ಏಕೆ ಸುಮ್ಮನೆ ಮಾತನಾಡುತ್ತೀರಿ ? ವಿಧಾನ ಪರಿಷತ್ತಿನದು I have not given.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಕೇಳಿಸಾರ್ ಈಗ 1.30 ಯಿಂದ 3.00 ಗಂಟೆಯವರೆಗೆ ರಾಹುಕಾಲ ಇದೆ, ಮಾತನಾಡುವುದು ಬೇಡವೆಂದು ನಾನು ಹೇಳಿದೆ. ರೇವಣ್ಣನವರು ಕೇಳಲಿಲ್ಲ.

ಅಧ್ಯಕ್ಷರು : ನಾನು ವಿಧಾನ ಪರಿಷತ್ತಿನ ಬಗ್ಗೆ ಏನೂ ಕೊಡಲೇ ಇಲ್ಲ.

ಶ್ರೀ ಆರ್. ಅಶೋಕ್ : ಮಾನ್ಯ ಸಿದ್ದರಾಮಯ್ಯನವರೆ, ನಾನು ಅವರಿಗೆ ರಾಹುಕಾಲ ಇದೆ ಮಾತನಾಡುವುದು ಬೇಡ, 3.00 ಗಂಟೆ ಮೇಲೆ ಮಾತನಾಡಿ ಎಂದು ರೇವಣ್ಣನವರಿಗೆ ಹೇಳಿದೆ. ಅವರು ಇಲ್ಲ, ಇಲ್ಲ ರಾಹುಕಾಲ ಒಳ್ಳೆಯದು ಎಂದು ಹೇಳಿದರು. ಈಗ ನೋಡಿ ಸಿಕ್ಕಿಹಾಕಿಕೊಂಡರು. ದಯವಿಟ್ಟು ಕ್ಷಮಾಪಣೆ ಕೇಳಿಬಿಟ್ಟು ಇದನ್ನು ಮುಕ್ತಾಯ ಮಾಡಿ.

ಅಧ್ಯಕ್ಷರು : ದೊಡ್ಡವರು ಆಗುತ್ತೀರಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, 69 ಜನಕ್ಕೆ ನೋಟಿಸ್ ಕೊಟ್ಟಿರುವುದನ್ನು ಬೇಕಾದರೆ ಎರಡು-ಮೂರು ದಿನ...

ಅಧ್ಯಕ್ಷರು : ಅದು ಸರಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಾನು ಏನು ಹೇಳಬೇಕೆಂದು ಇದ್ದೇನೆ ಅದನ್ನು ಹೇಳುತ್ತೇನೆ. ಸುಮ್ಮನೆ ಏಕ್‌ದಂ ಆಗಿ ಕ್ಷಮಾಪಣೆ ಕೇಳಲೇ ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಡವಳಿಕೆ ನಿಯಮ 331 : "ಅಸಂಬಂಧ ವಿಷಯಗಳನ್ನು ಪ್ರಸ್ತಾಪಿಸುವ ಅಥವಾ ತನ್ನ ವಾದವನ್ನು ಅಥವಾ ಸದಸ್ಯರ ವಾದಗಳನ್ನು ಬೇಸರ ಪಡುವಷ್ಟು ಪುನಃ ಪುನಃ ಹೇಳುತ್ತಲೇ ಇರುವ ಸದಸ್ಯರೊಬ್ಬರ ವರ್ತನೆಯನ್ನು ಸದನದ ಗಮನಕ್ಕೆ ತಂದ ನಂತರ ಅಧ್ಯಕ್ಷರು ಆ ಸದಸ್ಯರನ್ನು ತಮ್ಮ ಭಾಷಣವನ್ನು ನಿಲ್ಲಿಸಬೇಕೆಂದು ನಿರ್ದೇಶಿಸಬಹುದು". ಮಾನ್ಯ ಅಧ್ಯಕ್ಷರೆ, ಕಳೆದ 25 ನಿಮಿಷದಿಂದ ಅದೇ ವಿಷಯ ಚರ್ಚೆ ಮಾಡುತ್ತಿದ್ದಾರೆ. ಕ್ಷಮಾಪಣೆ ಕೇಳಿಕೊಳ್ಳುತ್ತಿಲ್ಲ, ಆಧಾರ ಕೊಡುತ್ತಿಲ್ಲ, 331ರ ಮೇಲೆ ಏನು ಆಕ್ಷನ್ ತೆಗೆದುಕೊಳ್ಳುತ್ತೀರೆನ್ನುವುದು ತಮಗೆ ಬಿಟ್ಟಿದ್ದು.

ಅಧ್ಯಕ್ಷರು : ನಾನು ಕೊನೆಯದಾಗಿ ಹೇಳುತ್ತಿದ್ದೇನೆ, ನೀವು ಕ್ಷಮಾಪಣೆಯನ್ನು ಕೇಳಿದರೆ ದೊಡ್ಡವರಾಗುತ್ತೀರಿ. ನಾನು ಕ್ಷಮಾಪಣೆಯನ್ನು ಕೇಳಬೇಕೆಂದು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಎರಡು ವಿಷಯಗಳಿಗೆ point of order raise ಮಾಡಿದ್ದಾರೆ. ಮೊದಲನೆಯದಾಗಿ 69 ಜನರಿಗೆ ಸಂಬಂಧಪಟ್ಟ ದಾಖಲೆ...

ಅಧ್ಯಕ್ಷರು : ಈಗ ವಿಧಾನ ಪರಿಷತ್ತಿಗೆ ಸಂಬಂಧಪಟ್ಟಂತೆ ಏನೂ ತೆಗೆದುಕೊಂಡಿಲ್ಲ, ಸುಮ್ಮನೆ ಏಕೆ ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಾನು ಏನು ತಪ್ಪು ಮಾಡಿದ್ದೇನೆ ?

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ತಾವು ಹಿರಿಯ ಸದಸ್ಯರಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ : ನನಗೆ ಮಾತನಾಡುವುದಕ್ಕೆ ಬಿಡದಿದ್ದರೆ ನಾನು ಹೇಳುವುದಕ್ಕೆ ಆಗುವುದಿಲ್ಲ, free ಬಿಡಿ. ನನಗೆ ಮಾತನಾಡುವುದಕ್ಕೆ ಬಿಡದಿದ್ದರೆ ನಾನು ಏನು ಹೇಳಲಿ ? ಮಾನ್ಯ ಸಭಾಧ್ಯಕ್ಷರೆ, ಎರಡು ವಿಷಯವಾಗಿ ...

ಅಧ್ಯಕ್ಷರು : ನಾನು ರೂಲಿಂಗ್ ಕೊಟ್ಟು ಆಗಿದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಾನು ಕೇಳುವುದಕ್ಕಿಂತ ಮುಂಚೆ ವಿಷಯವನ್ನು ಹೇಳಬೇಕಲ್ಲಾ ? ಮಾನ್ಯ ಕಾನೂನು ಸಚಿವರು ಇದು[15]*** ಅಲ್ಲವೆಂದು ಹೇಳಿದರಲ್ಲಾ ? ಆಗ ನಾನು ಸುಮ್ಮನೆ ಇರಲಿಲ್ಲವಾ ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅವರು ಊರಿನ ಹೆಸರನ್ನು ಹೇಳಿದ್ದು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನೀವು ಏಕೆ ತಲೆ ಕೆಡಿಸಿಕೊಳ್ಳುತ್ತೀರಿ ? ಮಾನ್ಯ ಸಭಾಧ್ಯಕ್ಷರೆ, ಈಗ ಎರಡು ವಿಷಯಗಳ ಬಗ್ಗೆ point of order ಅನ್ನು raise ಮಾಡಿದ್ದಾರೆ. ಮೊದಲನೆಯದಾಗಿ, 69 ಜನರಿಗೆ ನೋಟಿಸ್ ಕೊಟ್ಟಿರುವಂಥದ್ದು, ಎರಡನೆಯದಾಗಿ

(ಗೊಂದಲ)

Sri S. Suresh Kumar : This is too much. ಸಭೆಯ ಗಾಂಭೀರ್ಯವನ್ನು ಈ ರೀತಿ ಮಾಡುವುದಕ್ಕೆ ಆಗುವುದಿಲ್ಲ.

---

[15] ಮಾನ್ಯ ಸಭಾ ಅಧ್ಯಕ್ಷರ ಆದೇಶದನ್ವಯ ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು : ನಾನು ಮತ್ತೆ ಮತ್ತೆ ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಹೇಳುವುದಕ್ಕೆ ಬಿಡುವುದಿಲ್ಲವೆಂದರೆ ಏನು ಮಾಡಲಿ ? ನಾನು ಹೇಳುವುದಕ್ಕೆ ಬಿಡಿ.

ಅಧ್ಯಕ್ಷರು : ನಾನು ಈಗ ವಿಧಾನ ಪರಿಷತ್ತಿನ ವಿಚಾರದಲ್ಲಿ ಯವುದೇ ರೂಲಿಂಗ್ ಅನ್ನು ಕೊಟ್ಟಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಕೊಡಿ, ರೂಲಿಂಗ್ ಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಅವರು point of order ಪ್ರಸ್ತಾಪ ಮಾಡಿದ್ದಾರೆ. ನಾನು specific ಆಗಿ ಹೇಳುತ್ತೇನೆ. ಅವರು ವಿಧಾನ ಪರಿಷತ್ತಿನ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ಅದು ಯಾವುದೇ policy issue ಮೇಲೆ ಮಾನ್ಯ ಮುಖ್ಯಮಂತ್ರಿಯವರು ಮಾತನಾಡಿದ್ದು ಅಲ್ಲ. ಅದನ್ನು ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಅವರು ಎರಡು ವಿಷಯಗಳ ಬಗ್ಗೆ ಕೇಳಿದ್ದಾರೆ. ಆ ಎರಡು ವಿಷಯಗಳಿಗೂ clarification ಕೊಡುತ್ತೇನೆ.

ಅಧ್ಯಕ್ಷರು : ಆಯಿತು, ನಿಮಗೆ ಅದಕ್ಕೂ ರೂಲಿಂಗ್ ಬೇಕಾ ?

ಶ್ರೀ ಹೆಚ್.ಡಿ. ರೇವಣ್ಣ : ಆ ಎರಡು ವಿಷಯಗಳಿಗೂ ನಾನು clarification ಕೊಟ್ಟು ಹೇಳುತ್ತೇನೆ.

ಅಧ್ಯಕ್ಷರು : ಈಗ ಎರಡಕ್ಕೂ ರೂಲಿಂಗ್ ಎಂದರೆ, ಒಂದಕ್ಕೆ ರೂಲಿಂಗ್ ಕೊಟ್ಟು ಆಗಿದೆ. ಮಾನ್ಯ ಮುಖ್ಯಮಂತ್ರಿಯವರು ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪ ಮಾಡಿದ್ದಾರೆನ್ನುವ ವಿಚಾರವನ್ನು ತಾವು ಪದೇ ಪದೇ ಏನು ಪ್ರಸ್ತಾಪ ಮಾಡಿದ್ದೀರಿ, ಈ ವಿಚಾರ ಯಾವುದೇ policy

matterಗೆ ಸಂಬಂಧ ಪಡದೇ ಇರುವುದರಿಂದ ಮಾನ್ಯ ಸಂಸದೀಯ ವ್ಯವಹಾರ ಸಚಿವರು ...

(ಗೊಂದಲ)

ಅಧ್ಯಕ್ಷರು : ನಾನು ರೂಲಿಂಗ್ ಕೊಡವುದಾದರೂ ಕೇಳಿ. You must have particulars.

ಶ್ರೀ ಹೆಚ್.ಡಿ. ರೇವಣ್ಣ : ಇದು policy matter ...

ಅಧ್ಯಕ್ಷರು : ರೂಲಿಂಗ್ ಕೊಡುವಾಗಲೂ ಎದ್ದು ನಿಂತು ಮಾತನಾಡುತ್ತೀರಲ್ಲಾ? ಇದು ಯಾವುದೇ policy matter ಗೆ ಸಂಬಂಧ ಪಡದೇ ಇರುವ ವಿಚಾರವಾಗಿರುವುದರಿಂದ ಈಗಾಗಲೇ ಎರಡು point of order ಅನ್ನು ಎತ್ತಿದ್ದಾರೆ. ವಿಧಾನ ಪರಿಷತ್ತಿನಲ್ಲಿ ಮಾನ್ಯ ಮುಖ್ಯಮಂತ್ರಿಯವರು, ಏನು ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಿದ್ದಾರೆ, ಅದನ್ನು ಇನ್ನು ಮುಂದೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ. That is number 2 ruling, Number one ruling, I have already given that you have made a baseless allegation. You must produce the documents otherwise ತಾವು ದೊಡ್ಡ ಮನಸ್ಸು ಮಾಡಿ ಅದಕ್ಕೆ ಕ್ಷಮೆ ಕೇಳಿ, ಇಲ್ಲದೇ ಹೋದರೆ ನಾವು ಬೇರೆ ರೀತಿಯಲ್ಲಿ ಸದನವನ್ನು ನಡೆಸಬೇಕಾಗುತ್ತದೆ. Please, ಸಹಕಾರ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, *[16] ಒಬ್ಬ ಸದಸ್ಯರ ಮೇಲೆ ಹೇಳಿದ್ದಾರೆ, ಅದಕ್ಕೂ ನೀವೇ ಹೇಳಬೇಕಾಗುತ್ತದೆ.

[ಗೊಂದಲ]

---

[16]***ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ